ಕರ್ನಾಟಕ ಸರ್ಕಾರ

ಸಂಖ್ಯೆ:ಎಡಿಎಂ1/ಸಿಆರ್/120/10-11

ಆಯುಕ್ತರ ಕಾರ್ಯಾಲಯ,
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮಾದಾಯ ದತ್ತಿಗಳ ಇಲಾಖೆ,
ಬೆಂಗಳೂರು. ದಿನಾಂಕ: 15-05-2010

ಜಿಲ್ಲಾಧಿಕಾರಿಗಳ ಕಛೇರಿ
ಹಾಸನ ಜಿಲ್ಲೆ, ಹಾಸನ
20 MAY 2010

## ಸುತ್ತೋಲೆ

ವಿಷಯ: ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿಸೂಚಿತ ಸಂಸ್ಥೆಗಳ ಚಿನ್ನಾಭರಣಗಳ ಮೌಲ್ಯಮಾಪನ ಮಾಡುವ ಕುರಿತು.

ಉಲ್ಲೇಖ: 1.ಈ ಕಛೇರಿಯ ಸುತ್ತೋಲೆ ಸಂ: ಎಡಿಎಂ/1/ಸಿಆರ್/1128/08-09 ದಿನಾಂಕ: 23.12.2008 ಮತ್ತು ಎಡಿಎಂ/1/ಸಿಆರ್/314/09-10 ದಿ: 15.09.2009.

****

ಉಲ್ಲೇಖದ ಸುತ್ತೋಲೆಗಳಲ್ಲಿ ಇಲಾಖಾ ವ್ಯಾಪ್ತಿಗೆ ಒಳಪಡುವ ದೇವಾಲಯಗಳು ಹೊಂದಿರುವ ಚಿನ್ನಾಭರವಣಗಳನ್ನು ಸಂರಕ್ಷಿಸಿಡುವುದು, ಇತ್ಯಾದಿಗಳ ಬಗ್ಗೆ ತಿಳಿಸಲಾಗಿತ್ತು.

ದಿನಾಂಕ: 6.05.2010 ರಂದು ನಡೆದ ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿಯ ಸಭೆಯಲ್ಲಿ ದೇವಸ್ಥಾನಗಳ ಚರಸ್ಥಿರ ಆಸ್ತಿಗಳ ವಿವರವನ್ನು ಕ್ರೋಢೀಕರಿಸಿ ಸಮಿತಿಗೆ ಮಂಡಿಸುವಂತೆ ತಿಳಿಸಲಾಗಿದೆ. ಆದರೆ ಹಲವಾರು ದೇವಸ್ಥಾನಗಳಲ್ಲಿ ದೇವಾಲಯಗಳು ಹೊಂದಿರುವ ಅತ್ಯಮೂಲ್ಯ ಆಭರಣಗಳ ತೂಕ, ಪರಿಶುದ್ಧತೆ, ಇತ್ತೀಚಿಗಿನ ಮೌಲ್ಯ ಮಾಪನವನ್ನು ದಾಖಲಿಸಿ ಆಭರಣ ವಹಿಯನ್ನು ನಿರ್ವಹಿಸದಿರುವುದು ಇಲಾಖೆಯ ಗಮನಕ್ಕೆ ಬಂದಿದೆ.

ಆದ್ದರಿಂದ ಎಲ್ಲಾ ಸಂಸ್ಥೆಗಳು ಹೊಂದಿರುವ ಆಭರಣಗಳ ತೂಕ, ಪರಿಶುದ್ಧತೆ, ಮೌಲ್ಯಮಾಪನವನ್ನು ಮಾಡಲು, ಜಿಲ್ಲಾಧಿಕಾರಿಯವರು ಅವರ ವ್ಯಾಪ್ತಿಯಲ್ಲಿ ಬರುವ ನೊಂದಾಯಿಸಲ್ಪಟಿರುವ ಸಂಸ್ಥೆ / ಏಜೆನ್ಸಿಯನ್ನು ಗುರುತಿಸಿ, ಅವರಿಗೆ ಪ್ರತಿ ದೇವಾಲಯಗಳ ಚಿನ್ನಾಭರಣಗಳ ಪರಿಶುದ್ಧತೆ, ತೂಕ, ಮೌಲ್ಯಮಾಪನ ಮಾಡುವ ಆದೇಶ ನೀಡಿ ನಿಗದಿತ ಅವಧಿಯೊಳಗೆ ಈ ಕಾರ್ಯವನ್ನು ಪೂರ್ಣಗೊಳಿಸುವಂತೆ ತಿಳಿಸಿದೆ. ದೇವಾಲಯವಾರು

..2

P.T.O

ಆಭರಣಗಳ ಚಿತ್ರದೊಂದಿಗೆ ಕ್ಯಾಟಲಾಗ್ ಸಹಿತ ಮೌಲ್ಯಮಾಪನ ರಿಜಿಸ್ಟರ್ ತಯಾರಿಸಿ. ಮೌಲ್ಯಮಾಪಕರಿಂದ ದಿನಾಂಕದೊಂದಿಗೆ ದೃಢೀಕರಿಸಿ ಒಂದೊಂದು ಪ್ರತಿಯನ್ನು ದೇವಾಲಯದಲ್ಲಿ. ತಹಸೀಲ್ದಾರ್/ ಸಹಾಯಕ ಆಯುಕ್ತರು. ಧಾರ್ಮಿಕ ದತ್ತಿ ಇಲಾಖೆ/ ಉಪ ವಿಭಾಗಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ದಾಖಲೆಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಲು ತಿಳಿಸಿದೆ. ಈ ಕಾರ್ಯಕ್ಕೆ ತಗಲುವ ಸಂಪೂರ್ಣ ವೆಚ್ಚವನ್ನು ಆಯಾ ಸಂಸ್ಥೆಯ ನಿಧಿಯಿಂದ ಭರಿಸುವುದು.

(ಕ.ಪ್ರ.ಆ.ಅ)

ಆಯುಕ್ತರ ಪರವಾಗಿ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮಾದಾಯ ದತ್ತಿಗಳ ಇಲಾಖೆ

<u>ಪ್ರತಿಯನ್ನು:-</u>

1. ಜಿಲ್ಲಾಧಿಕಾರಿಯವರು __ಹಾಸನ__ ಜಿಲ್ಲೆ __ಹಾಸನ__.
2. ಸಹಾಯಕ ಆಯುಕ್ತರು. ಮುಜರಾಯಿ ಕಾಮಗಾರಿಗಳು. ನಗರಸಭಾ ವಲಯ. ಬೆಂಗಳೂರು.
3. ಸಹಾಯಕ ಆಯುಕ್ತರು. ಹಿಂದೂ ಧಾರ್ಮಿಕ ದತ್ತಿ ಇಲಾಖೆ. ಬೆಂಗಳೂರು ಗ್ರಾಮಾಂತರ/ಬಳ್ಳಾರಿ/ಬೆಳಗಾವಿ/ ಉಡುಪಿ/ ದಕ್ಷಿಣ ಕನ್ನಡ/ ಉತ್ತರ ಕನ್ನಡ.
4. ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ______________ ದೇವಾಲಯ ________
5. ಸ್ವಾಯಿ ಕಡತ.

ನಂ ಡಿವಿಎಸ್(3)ಸಿಆರ್ 125/10-11

ತಹಸೀಲ್ದಾರ್ ತಾಲ್ಲೂಕು ಕಛೇರಿ ಹಾಸನ. ಆಲೂರು. ಬೇಲೂರು ಅರಸೀಕೆರೆ. ಅರಕಲಗೂಡು. ಹೊಳೆನರಸೀಪುರ ಸಕಲೇಶಪುರ ಚನ್ನರಾಯಪಟ್ಟಣ ರವರಿಗೆ ಉಲ್ಲೇಖ ಪತ್ರದಂತೆ ಸೂಚಿಸಿರುವಂತೆ ಸೂಕ್ತ ಕ್ರಮ ತೆಗೆದು ಕೊಳ್ಳುವಂತೆ ಸೂಚಿಸಿದೆ

ಅಪರ ಜಿಲ್ಲಾಧಿಕಾರಿ
ಹಾಸನ ಜಿಲ್ಲೆ, ಹಾಸನ

DVS ... ಚನ್ನರಾಯಪಟ್ಟಣ ತಾಲ್ಲೂಕು

240

COR/3406/10-11

17